ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001.**

ಸಂಖ್ಯೆ : ಸಿ7(2)ಪ್ರಾಶಿಅ/ಇತರೆ/135/2014–15 ದಿನಾಂಕ: 13.04.2015

## ಸುತ್ತೋಲೆ

ವಿಷಯ : ಖಾಸಗಿ ಶಾಲೆಗಳಲ್ಲಿ ಶುಲ್ಕದ ವಿವರಗಳನ್ನು ಸೂಚನಾಫಲಕ(Notice Board)ದಲ್ಲಿ ಪ್ರಕಟಿಸುವ ಬಗ್ಗೆ.

ಉಲ್ಲೇಖ: 1) ಆಯುಕ್ತರು, ಸಾ.ಶಿ,ಇ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಸಿ7(2) ಪ್ರಾಶಿಅ/ದಾಖಲಾತಿ/64/2013–14, ದಿನಾಂಕ: 24.01.2015. & 28.02.3015.

2) ಅಧ್ಯಕ್ಷರು/ಕಾರ್ಯದರ್ಶಿಗಳು, ಕರ್ನಾಟಕ ವಿದ್ಯಾರ್ಥಿಗಳ ಪೋಷಕರ ಜಾಗೃತಿ ವೇದಿಕೆ (ರಿ), ಬೆಂಗಳೂರು–58 ರವರ ಮನವಿ ದಿನಾಂಕ: 23.01.2015.

*****

ರಾಜ್ಯದಲ್ಲಿರುವ ಖಾಸಗಿ ಪೂರ್ವ ಪ್ರಾಥಮಿಕ, ಪ್ರಾಥಮಿಕ & ಪ್ರೌಢ ಶಾಲೆಗಳಲ್ಲಿ 2015–16 ನೇ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಂದ ಪಡೆಯಬಹುದಾದ ಶುಲ್ಕದ ಬಗ್ಗೆ ಉಲ್ಲೇಖ–1 ರಲ್ಲಿ ಸುತ್ತೋಲೆಯನ್ನು ಹೊರಡಿಸಿದೆ. ಉಲ್ಲೇಖ–2 ರಲ್ಲಿ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಪೋಷಕರ ಜಾಗೃತಿ ವೇದಿಕೆ (ರಿ) ಬೆಂಗಳೂರು ರವರು ಮನವಿ ಸಲ್ಲಿಸಿ ಶಾಲಾ ಮಾನ್ಯತೆ ಹಾಗೂ ಶುಲ್ಕದ ವಿವರಗಳನ್ನು ದೊಡ್ಡ ಅಕ್ಷರಗಳಲ್ಲಿ ಶಾಲಾ ಆವರಣ ಹಾಗೂ ಗೇಟಿನ ಮುಂಭಾಗದಲ್ಲಿ ಪ್ರಕಟಿಸುವಂತೆ ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಮನವಿಯನ್ನು ಪರಿಶೀಲಿಸಲಾಗಿ ಮನವಿ ಸೂಕ್ತವಾಗಿರುತ್ತದೆ. ಆದುದರಿಂದ ಖಾಸಗಿ ಶಾಲಾ ಆಡಳಿತ ಮಂಡಳಿಗಳು ತಮ್ಮ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಶಾಲೆಗಳಲ್ಲಿ ಕೆಳಕಂಡ ವಿವರಗಳನ್ನು ಶಾಲಾ ಆವರಣ ಮತ್ತು ಗೇಟಿನ ಮುಂಭಾಗದಲ್ಲಿ ದೊಡ್ಡ ಅಕ್ಷರಗಳಲ್ಲಿ 6 X 10 ಅಳತೆಯ ಬೋರ್ಡಿನಲ್ಲಿ ಶಾಲಾ ಮಾಹಿತಿ ಹಾಗೂ ಕರ್ನಾಟಕ ಶಿಕ್ಷಣ ಕಾಯಿದೆ ಅನ್ವಯ ನಿಗಧಿಪಡಿಸಿರುವ ಶುಲ್ಕದ ವಿವರಗಳನ್ನು ಪ್ರಕಟಿಸುವಂತೆ ತಿಳಿಸಿದೆ. ಅಲ್ಲದೆ ಶಾಲಾ ಆಡಳಿತ ಮಂಡಳಿಗಳು ಕ್ರಮ ವಹಿಸಿದ ಬಗ್ಗೆ ಸ್ಥಳೀಯ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲಿಸುವುದು. ಉಲ್ಲಂಘನೆ ಮಾಡುವ ಶಾಲಾ ಆಡಳಿತ ಮಂಡಳಿಗಳ ವಿರುದ್ಧ ನಿಯಮಾನುಸಾರ ಜಿಲ್ಲಾ ಉಪನಿರ್ದೇಶಕರುಗಳು ಕ್ರಮ ವಹಿಸಲು ಸೂಚಿಸಿದೆ.

| ಕ್ರ ಸಂ. | ಪ್ರಕಟಿಸಬೇಕಾದ ವಿಷಯ | ವಿವರ |
|---|---|---|
| 1 | ಶಾಲಾ ಆಡಳಿತ ಮಂಡಳಿಯ ಹೆಸರು ಮತ್ತು ನೊಂದಣಿ ಸಂಖ್ಯೆ | |
| 2 | ಶಾಲಾ ಆಡಳಿತ ಮಂಡಳಿಯ ವರ್ಗ / ಅಲ್ಪ ಸಂಖ್ಯಾತ ಶಾಲೆಯಾಗಿದ್ದಲ್ಲಿ ಘೋಷಣೆ ಮಾಡಿರುವ ಆದೇಶ ಹಾಗೂ ಇತರೆ ಮಾಹಿತಿಗಳು | |
| 3 | ಶಾಲೆಯ ಹೆಸರು ಮತ್ತು ಪೂರ್ಣ ವಿಳಾಸ | |
| 4 | ಶಾಲಾ ನೊಂದಣಿ ಸಂಖ್ಯೆ ಮತ್ತು ದಿನಾಂಕ | |
| 5 | ಅನುಮತಿ ಪಡೆದ ಮಾಧ್ಯಮ ಮತ್ತು ತರಗತಿ | |
| 6 | ಶಾಲಾ ಮಾನ್ಯತೆ ನವೀಕರಣದ ವಿವರ (ಯಾವ | |

| | | |
|---|---|---|
| | ಸಾಲಿನಿಂದ ಯಾವ ಸಾಲಿನವರೆಗೆ) | |
| 7 | ನಿಗಧಿತ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ನೇಮಕ ಮಾಡಿರುವ ಬಗ್ಗೆ ವಿವರ | |
| 8 | ಕರ್ನಾಟಕ ಶಿಕ್ಷಣ ಕಾಯಿದೆ ಅನ್ವಯ ನಿಗಧಿಪಡಿಸಿರುವ ಶುಲ್ಕದ ವಿವರಗಳನ್ನು ತರಗತಿವಾರು ಪ್ರಕಟಿಸುವುದು. | |
| 9 | ವಿಶೇಷ ಅಭಿವೃದ್ಧಿ ಶುಲ್ಕ | |
| 10 | ಶಾಲಾ ತರತಿಗಳು ನಡೆಯುವ ವೇಳಾ ಪಟ್ಟಿ | |
| 11 | ವಿದ್ಯಾರ್ಥಿಗಳು ಮತ್ತು ಪೋಷಕರ ಸಭೆ ನಡೆಯುವ ದಿನಾಂಕಗಳು | |
| 12 | ಪರೀಕ್ಷೆಗಳ ವೇಳಾ ಪಟ್ಟಿ | |
| 13 | ಶಾಲೆ ವಿದ್ಯಾರ್ಥಿಗಳಿಗೆ ಮತ್ತು ಪೋಷಕರಿಗೆ ಯಾವುದೇ ರೀತಿಯ ಅನಗತ್ಯ ತೊಂದರೆಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಬೇಕಾದ ವಿವರ | 1) ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರರವರನ್ನು ಯಾವುದೇ ಶಾಲೆಯಲ್ಲಿ ಡೊನೇಷನ್ ಅಥವಾ ಅಧಿಕ ಶುಲ್ಕ ವಸೂಲಾತಿಗೆ ಒತ್ತಾಯ ಮಾಡಿದಲ್ಲಿ ಸಂಪರ್ಕಿಸುವುದು. ದೂರವಾಣಿ ಸಂಖ್ಯೆ:<br>2) ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರ ದೂರವಾಣಿ ಸಂಖ್ಯೆ.<br>3) ಸ್ಥಳೀಯ ಕ್ಷೇತ್ರ ಶಿಕ್ಷಣಾಧಿಕಾರಿಯ ದೂರವಾಣಿ ಸಂಖ್ಯೆ.<br>4) ಸ್ಥಳೀಯ ಪೋಲೀಸ್ ಠಾಣೆಯ ದೂರವಾಣಿ ಸಂಖ್ಯೆ.<br>5) ಅಗ್ನಿಶಾಮಕ ಠಾಣೆ ದೂರವಾಣಿ ಸಂಖ್ಯೆ.<br>6) ಆಂಬುಲೆನ್ಸ್ ಸಂಖ್ಯೆಯನ್ನು ಅಳವಡಿಸುವುದು. |

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ

- ✓ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ
- ✓ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಮಾಹಿತಿಗಾಗಿ
- ✓ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಮುಂದಿನ ಕ್ರಮಕ್ಕಾಗಿ ಮತ್ತು ಸಾರ್ವಜನಿಕವಾಗಿ ಪ್ರಕಟಣೆ ನೀಡಿ ಇಲಾಖಾ ವೆಬ್‌ಸೈಟ್‌ನಲ್ಲಿ ಶಾಲಾವಾರು ಮಾಹಿತಿಯನ್ನು ಅಳವಡಿಸುವುದು.
- ✓ ರಾಜ್ಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ

ಪ್ರತಿಯನ್ನು

- ✓ ಅಪರ ಆಯುಕ್ತರು, ಧಾರವಾಡ/ಗುಲ್ಬರ್ಗಾ ಇವರಿಗೆ ಮುಂದಿನ ಕ್ರಮಕ್ಕಾಗಿ